# ಉಪನಿಷತ್ತಿನ ಕಥೆಗಳು

ಸ್ವಾಮಿ ವೀರೇಶಾನಂದ

**ಪೀಠಿಕೆ**

**'ಉಪನಿಷತ್ತುಗಳ ಕಥೆಗಳು'** ಎಂಬುದು ಈ ಲೇಖನಮಾಲೆಯ ಹೆಸರು. ಈ ಕಥೆಗಳ ಉದ್ದೇಶ ಹಿಂದೆ ಆಗಿ ಹೋದ ಸಂಗತಿಗಳನ್ನು ವಿವರಿಸುವುದಲ್ಲ ; ಉಪನಿಷತ್ತುಗಳ ಸಂದೇಶವನ್ನು ಸರಳ ಭಾಷೆಯಲ್ಲಿ ತಿಳಿಸುವುದು. ಇಲ್ಲಿ ಒಂದು ಕಷ್ಟ ಇದೆ. ಕೆಲವು ಉಪನಿಷತ್ತುಗಳಿಗೆ ಕತೆಗಳ ಹಂದರ ಇದೆ, ಕೆಲವಕ್ಕೆ ಇಲ್ಲ ; ಬರಿಯ ಸಂದೇಶವಷ್ಟೇ ಇದೆ. ಅಂಥ ಉಪನಿಷತ್ತುಗಳು ಕೂಡ ಏನು ಹೇಳುತ್ತವೆ ಎಂದು ನಾವು ತಿಳಿದುಕೊಳ್ಳಬೇಕಷ್ಟೆ? ಹೀಗಾಗಿ ಕಥೆ ಇಲ್ಲದ ಉಪನಿಷತ್ತುಗಳಿಗೆ ಕಾಲ್ಪನಿಕ ಕಥಾಚಿತ್ರಣವನ್ನು ಹೊದಿಸಲಾಗಿದೆ. ಇದರಿಂದಾಗಿ ಅವುಗಳು ತಿಳಿಸಿಕೊಡುವ ತತ್ತ್ವಗಳನ್ನು ತಿಳಿದು ಕೊಳ್ಳುವ ಆಸಕ್ತಿ ಎಲ್ಲರಲ್ಲೂ ಮೂಡಲಿ ಎನ್ನುವುದೇ ಇದರ ಉದ್ದೇಶ.

೧

## ಈಶಾವಾಸ್ಯಮಿದಂ ಸರ್ವಂ

ಒಂದು ಕಾಲ್ಪನಿಕ ಕಥಾ ಹಂದರದ ಮೂಲಕ ಗಹನವಾದ ಜೀವನ ಸಿದ್ಧಾಂತವನ್ನು ಪ್ರಸ್ತುತ ಪಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಉಪನಿಷತ್ತಿನ ಹೆಸರು ಈಶಾವಾಸ್ಯ ಉಪನಿಷತ್ತು ಎಂದು. ಇದು ಶುಕ್ಲ ಯಜುರ್ವೇದದ ಸಂಹಿತೆಯ ಭಾಗದಲ್ಲಿ ಬರುತ್ತದೆ. ಹೀಗಾಗಿ ಇದಕ್ಕೆ ಸಂಹಿತೋಪನಿಷತ್ತು ಎಂದೂ ಹೆಸರು. ಇಲ್ಲಿನ ಮೊದಲ ಮಂತ್ರ **ಈಶಾವಾಸ್ಯಮಿದಂ..** ಎಂದು ಆರಂಭವಾಗುತ್ತದೆ. ಹೀಗಾಗಿ ಇದಕ್ಕೆ ಈಶಾವಾಸ್ಯ ಉಪನಿಷತ್ತು ಎಂದು ಹೆಸರಾಗಿದೆ. ಸಣ್ಣ ರೂಪವಾಗಿ ಇದನ್ನು ಈಶೋಪನಿಷತ್ತು ಎಂದೂ ಕರೆಯುವ ವಾಡಿಕೆಯೂ ಇದೆ.

**ದೇ**ವದತ್ತನೆಂಬ ಬ್ರಾಹ್ಮಣನಿದ್ದನು. ಅಂದಿನ ಕಾಲದ ವಾಡಿಕೆಯಂತೆ ವೇದಗಳ ಅಭ್ಯಾಸವನ್ನು ಮಾಡಿದ್ದನು. ಆ ವೇದಗಳನ್ನು ಪ್ರಾಯೋಗಿಕವಾಗಿ ಆಚರಣೆಗೆ ತರುವ ಯಜ್ಞಯಾಗಾದಿಗಳನ್ನು ಕೂಡ ನಡೆಸಿಕೊಂಡು ಬರುತ್ತಿದ್ದನು. ಶುಕ್ಲ ಯಜುರ್ವೇದದ ಶಾಖೆಯಲ್ಲಿ ಪಾರಂಗತನಾದ ಅವನ ಜೀವನವು ಸುಭಿಕ್ಷವಾಗಿಯೇ ಇತ್ತು. ಅನುಕೂಲಳಾದ ಹೆಂಡತಿ ಸುಶೀಲೆ ಮತ್ತು ಎರಡು ಮಕ್ಕಳ ಪುಟ್ಟ ಸಂಸಾರ ಅವನದಾಗಿತ್ತು. ಅವನ ತಂದೆತಾಯಿಗಳು ವೃದ್ಧರಾಗಿದ್ದರು. ಅವರ ಸೇವೆಯನ್ನು ಅವನು ಮಾಡುತ್ತಿದ್ದನು. ಪ್ರತಿನಿತ್ಯ ಮಾಡಬೇಕಾದ ಅಗ್ನಿಕಾರ್ಯಗಳನ್ನು ಚಾಚೂತಪ್ಪದೆ ಮಾಡುತ್ತಿದ್ದನು. ವಿಶೇಷ ಸಂದರ್ಭಗಳಲ್ಲಿ ದೊಡ್ಡ ಯಜ್ಞಗಳನ್ನು ಕೈಗೊಳ್ಳುತ್ತಿದ್ದನು. ತನ್ನ ನೆರೆಹೊರೆಯವರ, ಸ್ನೇಹಿತರ, ಬಂಧುಗಳ ವೈದಿಕ ಕಾರ್ಯಗಳಲ್ಲಿ ತಪ್ಪದೆ ಪಾಲ್ಗೊಂಡು ನೆರವಾಗುತ್ತಿದ್ದನು. ಕರ್ಮಗಳನ್ನು ಮಾಡುತ್ತ, ಆ ಕರ್ಮಗಳ ಮೂಲಕ ಫಲವನ್ನು ಪಡೆದು ಸುಖಭರಿತವಾದ ಜೀವನವನ್ನು ನಡೆಸಬೇಕೆಂಬ ಸಿದ್ಧಾಂತಕ್ಕೆ ಅವನು ಬದ್ಧನಾಗಿದ್ದನು. ಧನ, ಆರೋಗ್ಯ, ಒಳ್ಳೆಯ ಕುಟುಂಬ, ನೆರೆಹೊರೆಯವರು – ಎಲ್ಲದರಿಂದ ಕೂಡಿ ಸಂತೋಷವಾಗಿಯೇ ಇದ್ದನು. ಅಂದಿನ ಕಾಲದಲ್ಲಿ ಜನರ ಆದರ್ಶವೇ ಇದಾಗಿತ್ತು. ಯಜ್ಞಯಾಗಾದಿಗಳಿಂದ ದೇವತೆಗಳು ಸುಪ್ರೀತರಾಗುತ್ತಾರೆ. ನಮಗೆ ಬೇಕಾದ್ದನ್ನು ಅವರು ಕರುಣಿಸುತ್ತಾರೆ. ಇದರಿಂದ ನಮ್ಮ ಈ ಜಗತ್ತಿನ ಜೀವನ ಚೆನ್ನಾಗಿ ನಡೆದುಕೊಂಡುಹೋಗುತ್ತದೆ. ಇಷ್ಟು ಸಾಕಲ್ಲವೆ? ದೇವದತ್ತನು ಅಂಥ ಸಾಧಾರಣ ಜನರ ವರ್ಗದವನೇ ಆಗಿದ್ದನು.

ಒಮ್ಮೆ ಒಂದು ಗುರುಕುಲವೊಂದರಲ್ಲಿ ವಿಶೇಷ ಪ್ರವಚನವಿದೆ ಎಂದು ಅವನು ಕೇಳಿತಿಳಿದನು. ವೈದಿಕ ಕರ್ಮಗಳನ್ನು ಸರಿಯಾಗಿ ಅನುಷ್ಠಾನ ಮಾಡುವ ವಿಷಯದಲ್ಲಿ ಜಿಜ್ಞಾಸೆಗಳು, ಗೋಷ್ಠಿಗಳು ಅಂದಿನ ಕಾಲದಲ್ಲಿ ನಡೆಯುವುದು ಸಹಜವೇ ಆಗಿತ್ತು. ಕುತೂಹಲದಿಂದ ತನ್ನ ನಿತ್ಯಕರ್ಮಗಳನ್ನು ಮುಗಿಸಿ, ಪುಷ್ಕಳ ಭೋಜನವನ್ನು ಮಾಡಿ, ತನ್ನ ಮನೆಯಿಂದ ಎರಡು ಮೈಲುಗಳಿದ್ದ ಗುರುಕುಲಕ್ಕೆ ದೇವದತ್ತನು ನಡೆದೇ ಹೊರಟನು.

ಅವನು ಗುರುಕುಲವನ್ನು ತಲುಪುವ ವೇಳೆಗೆ ಸಂಜೆ ನಾಲ್ಕು ಗಂಟೆಯಾಗಿತ್ತು. ವೃದ್ಧರಾದ ಋಷಿಗಳೊಬ್ಬರು ವೇದಿಕೆಯ ಮೇಲೆ ಕುಳಿತಿದ್ದರು. ಅವರ ಹೆಸರು ಆಚಾರ್ಯ ಭಾರ್ಗವ. ಅವರನ್ನು ನೋಡಿದೊಡನೆಯೇ ಅವರೆಡೆಗೆ ದೇವದತ್ತನು ಆಕರ್ಷಿತನಾದನು. ಅವನ ಮನೆಯ ಹತ್ತಿರದಲ್ಲಿ ಅದೆಷ್ಟೋ ವೃದ್ಧರು ವಾಸಿಸುತ್ತಿದ್ದರು. ಅವರೆಲ್ಲರೂ ಜೀವನ ಪೂರ್ತಿ ಕರ್ಮಾನುಷ್ಠಾನ ಮಾಡಿಕೊಂಡು ಬಂದವರೇ. ಅವರು ಕೂಡ ಅಗ್ನಿಯಂತೆ ತೇಜಸ್ಸಿನಿಂದ ಬೆಳಗುತ್ತಿದ್ದರು. ಸದಾ ಕ್ರಿಯಾಶೀಲರಾಗಿದ್ದರು. ಪ್ರಕೃತಿಯು ಕೊಡಮಾಡಿದ ಭೋಗಗಳನ್ನು ಸಂತೋಷದಿಂದ ಅನುಭವಿಸುತ್ತಿದ್ದರು. ಆದರೆ ಆಚಾರ್ಯ ಭಾರ್ಗವರ ಮುಖದಲ್ಲಿ ಅದಕ್ಕಿಂತ ಮಿಗಿಲಾದ ಹೇಳಲಾಗದ ಆನಂದ, ಸಂತೃಪ್ತಿಗಳು ಮನೆಮಾಡಿದ್ದವು. ಹಾಗೆಂದೇ ಬಹಳಷ್ಟು ಜನ ಅವರೆಡೆಗೆ ಆಕರ್ಷಿತರಾಗಿದ್ದರು. ಅಲ್ಲಿ ನೆರೆದಿದ್ದ ಹತ್ತಾರು ಜನರ ಮಧ್ಯೆ ಕುಳಿತ ದೇವದತ್ತನು ಅವರ ಪ್ರವಚನವನ್ನು ಕೇಳಲು ಆರಂಭಿಸಿದನು.

''ಮಕ್ಕಳೇ, ನಮಗೆ ಕಾಣುವ ಈ ಜಗತ್ತು ಪೂರ್ಣವೇ ಆಗಿದೆ. ನಮಗೆ ಕಾಣದ ಜಗತ್ತು ಕೂಡ ಪೂರ್ಣವೇ ಆಗಿದೆ. ಕಾಣದೆ ಇರುವ ಪೂರ್ಣದಿಂದಲೇ ಕಾಣಬರುವ ಈ ಪೂರ್ಣವು ಸೃಷ್ಟಿಗೊಂಡಿದೆ. ಇಲ್ಲೊಂದು ರಹಸ್ಯವಿದೆ. ಪೂರ್ಣದಿಂದ ಪೂರ್ಣವನ್ನು ತೆಗೆದರೆ, ಪೂರ್ಣವೇ ಉಳಿದುಕೊಳ್ಳುತ್ತದೆ.''

ಕೇಳುವುದಕ್ಕೇನೋ ಚೇತೋಹಾರಿಯಾಗಿದ್ದ ಈ ಮಾತುಗಳ ಅರ್ಥ ದೇವದತ್ತನಿಗೆ ತಿಳಿಯಲಿಲ್ಲ. ಆಚಾರ್ಯ ಭಾರ್ಗವರು ನಸುನಕ್ಕು ಮುಂದುವರೆದರು: ''ಮಕ್ಕಳೇ, ನನಗೆ ಗೊತ್ತು. ಇದರ ಅಂತರಾರ್ಥ ನಿಮಗೆ ತಿಳಿಯಲಿಲ್ಲ. ಅದನ್ನು ತಿಳಿಸುವುದೇ ಇವತ್ತಿನ ಪ್ರವಚನದ ಉದ್ದೇಶ. ಕೇಳಲು ಸಿದ್ಧರಾಗಿದ್ದೀರೇನು?'' ಸ್ವಲ್ಪ ನೀರು ಕುಡಿದು, ಕಣ್ಣು ಮುಚ್ಚಿ , ಅಂತಸ್ಥರಾಗಿದ್ದುಕೊಂಡು, ಆಚಾರ್ಯ ಭಾರ್ಗವರು ಮತ್ತೆ ಮಾತನಾಡಿದರು:

''ಮಕ್ಕಳೇ, ಪೂರ್ಣವೆಂದರೆ ಭಗವಂತ, ಈಶ್ವರ. **ಈಶಾವಾಸ್ಯಮಿದಂ ಸರ್ವಂ** – ನಮ್ಮ ಕಣ್ಣಿಗೆ ಕಾಣುವ ಈ ಜಗತ್ತೆಲ್ಲವೂ ಆ ಪರಮಾತ್ಮನಿಂದಲೇ ಮುಚ್ಚಿಹೋಗಿದೆ ಎಂದು ನಾವು ಭಾವಿಸಿಕೊಳ್ಳಬೇಕು. ಹಾಗೆ ಮಾಡಿದರೆ, ನಾನು ಹೇಳಿದ ಮಾತಿನ ಅರ್ಥ ನಿಮಗೆ ಭಾಸವಾಗುತ್ತದೆ. ಪರಮಾತ್ಮನು ಪ್ರತಿಯೊಬ್ಬರಲ್ಲಿಯೂ ಇದ್ದಾನೆ. ಅವನೇ ಇಡೀ ಪ್ರಪಂಚವನ್ನೂ ವ್ಯಾಪಿಸಿದ್ದಾನೆ. ಹೀಗಾಗಿ ಅವನು ಈಶನಾಗಿದ್ದಾನೆ. **ಈಶ** ಎಂದರೆ ಆಳುವವನು ಎಂದರ್ಥ. ರಾಜ್ಯವನ್ನು ಆಳುವ ರಾಜನಂತೆ ಅವನು ಆಳುವುದಿಲ್ಲ. ಎಲ್ಲ ಜೀವರಾಶಿಗಳ ಅಂತರಾತ್ಮನೂ, ಹಾಗೆಯೇ ಎಲ್ಲ ಜಡವಸ್ತುಗಳ ಸಾರಸತ್ವನೂ ಅವನೇ ಆಗಿದ್ದಾನೆ. ಅವನು ಒಂದು ವ್ಯಕ್ತಿಯಲ್ಲ; ತತ್ತ್ವ. ಆ ತತ್ತ್ವ ಅರಿವಿನ ರೂಪದ್ದು , ಜ್ಞಾನದ ರೂಪದ್ದು.

''ಮಕ್ಕಳೇ, ಹೀಗೆ ಭಾವಿಸುವುದರಿಂದ ಎಲ್ಲವೂ ಭಗವನ್ಮಯವೇ ಎಂಬುದು ನಮಗೆ ಗೊತ್ತಾಗುತ್ತದೆ. ಆದರೆ ನಮ್ಮ ಮನೆ, ಧನ ಕನಕಗಳು, ಕುಟುಂಬ – ಇವೇ ಶಾಶ್ವತ ಎಂಬ ಭ್ರಮೆ ನಮ್ಮನ್ನು ಕಾಡುತ್ತಿದೆ. ಈ ಭ್ರಮೆಯಿಂದ ನಾವು ಪಾರಾಗಬೇಕು. ಎಲ್ಲವೂ ಪರಮಾತ್ಮನಿಂದ ಆವೃತವಾಗಿದೆ ಎಂಬ ಜ್ಞಾನದಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕು. ನಮ್ಮಲ್ಲಿ ಇರುವ ಸಂಪತ್ತಿನ ವಿಷಯದಲ್ಲಾಗಲಿ, ಇತರರ ಸಂಪತ್ತಿನ ವಿಷಯದಲ್ಲಾಗಲಿ ಅತಿಯಾದ ಆಸೆ ಒಳ್ಳೆಯದಲ್ಲ. ಅತಿಯಾದ ಆಸೆಯಿಂದ ಜ್ಞಾನ ನಮಗೆ ದೂರವಾಗುತ್ತದೆ. ಅಜ್ಞಾನ ಕವಿದುಕೊಳ್ಳುತ್ತದೆ. ಇಷ್ಟಾಗಿಯೂ ಯಾರ ಹಣ ಇದು? ಎಲ್ಲವೂ ಭಗವಂತನದೇ ಅಲ್ಲವೆ?''

ಪ್ರವಚನ ಮುಗಿಯಿತು. ಆದರೆ ಬಂದಿದ್ದವರ ಮುಖದಲ್ಲಿ ಏನೋ ಕಳವಳ, ಅಸಮಾಧಾನ ಎದ್ದುಕಾಣುತ್ತಿತ್ತು. ಆಚಾರ್ಯ ಭಾರ್ಗವರು ಅದನ್ನು ಗಮನಿಸಿದರು. ಎದ್ದವರು, ಕೈಮುಗಿದುಕೊಂಡು, ಒಂದು ವಿನಂತಿಯನ್ನು ಮಾಡಿದರು: ''ಮಕ್ಕಳೇ, ಇದೊಂದು ಹೊಸ ವಿಚಾರ. ಇತ್ತೀಚಿಗೆ ನಮ್ಮ ಋಷಿಗಳು ಹೊಸದಾಗಿ ಚಿಂತಿಸಲು ಆರಂಭಿಸಿದ್ದಾರೆ. ಅಂಥ ಒಬ್ಬ ಮಹಾತ್ಮನ ಬಳಿಗೆ ನಾನು ಹೋಗಿದ್ದೆ. ಅವರು ನನಗೆ ತಿಳಿಸಿದ ಈ ವಿಚಾರ ನನಗೆ ಬಹಳ ಹಿಡಿಸಿತು. ಹಾಗೆಂದೇ ನಿಮ್ಮ ಬಳಿ ಹಂಚಿಕೊಂಡಿದ್ದೇನೆ. ನಿಮಗೆಲ್ಲರಿಗೂ ಶುಭವಾಗಲಿ.''

ದೇವದತ್ತನ ಮನಸ್ಸಿನಲ್ಲಿ ಕೂಡ ಸಂಶಯದ ಅಲೆಯೇ ಎದ್ದಿತ್ತು. ಸಂಜೆಯ ಅಗ್ನಿಕಾರ್ಯಗಳನ್ನು ಮಾಡುವ ಸಮಯದಲ್ಲಿ ಕೂಡ, ಆಚಾರ್ಯ ಭಾರ್ಗವರ ಮಾತುಗಳನ್ನೇ ಮೆಲುಕು ಹಾಕುತ್ತಿದ್ದನು. ಎಲ್ಲವೂ ಪರಮಾತ್ಮನೇ ಆದರೆ, ಆ ಭಾವನೆಯಷ್ಟೇ ಸಾಕಲ್ಲವೆ? ನಾವು ಮಾಡುವ ಈ ಕರ್ಮಗಳಿಗೆ ಅರ್ಥವಾದರೂ ಏನು? ಎಂದು ಅವನು ಅಂದುಕೊಂಡನು.

ಮರುದಿನ ಬೆಳಗ್ಗೆಯೂ ಅದೇ ಗುಂಗಿನಲ್ಲಿ ಇದ್ದ ದೇವದತ್ತನು, ಮಧ್ಯಾಹ್ನದ ಊಟ ಮುಗಿಸಿದ ಒಡನೆ, ಆಚಾರ್ಯ ಭಾರ್ಗವರ ಗುರುಕುಲಕ್ಕೆ ನಡೆದನು. ಆಚಾರ್ಯರು ತಮ್ಮ ಶಿಷ್ಯರಿಗೆ ವೇದಪಾರಾಯಣ ಮಾಡಿಸುತ್ತಿದ್ದರು. ಅದನ್ನು ಮಗಿಸಿ, ದೇವದತ್ತನೊಡನೆ ಮಾತನಾಡಲು ಆರಂಭಿಸಿದರು. ದೇವದತ್ತನ ಸಂಶಯವನ್ನು ಕೇಳಿತಿಳಿದ ಆಚಾರ್ಯರು, ''ಮಗು, ಕರ್ಮಗಳನ್ನು ಬಿಡಬೇಕು ಎಂದು ಯಾರು ನಿನಗೆ ಹೇಳಿದವರು? ನಾವು ನೂರು ವರ್ಷಗಳ ತುಂಬು ಜೀವನವನ್ನು ನಡೆಸಬೇಕಪ್ಪಾ. ಹಾಗೆ ಬದುಕಿರುವವರೆಗೂ ಕರ್ಮಗಳನ್ನು ಮಾಡುತ್ತಲೇ ಬದುಕಬೇಕೆಂಬ ಇಚ್ಛೆಯನ್ನು ಮನಸ್ಸಿನಲ್ಲಿ ತುಂಬಿಕೊಂಡಿರಬೇಕು. ನಮ್ಮಂಥವರಿಗೆ ಬೇರೆ ಮಾರ್ಗವುಂಟೆ? ಜೀವನದಲ್ಲಿ ಬಹಳ ಅಶುಭಗಳು, ಕೆಡುಕುಗಳು ಉಂಟಾಗಬಹುದು. ಅವುಗಳಿಂದ ಪಾರಾಗಬೇಕಾದರೆ, ವೈದಿಕ ಕರ್ಮಗಳನ್ನು ಮಾಡದೆ ದಾರಿಯಿಲ್ಲ.''

ಈ ಉತ್ತರದಿಂದ ದೇವದತ್ತನಿಗೆ ನಿರಾಸೆಯಾಯಿತು. ಕೆಲವು ತಿಂಗಳುಗಳಿಂದ ಅವನಿಗೆ ಕರ್ಮಾನುಷ್ಠಾನದಲ್ಲಿ ನೀರಸಭಾವನೆ ಬಂದಿತ್ತು. 'ಜೀವನವೆಂದರೆ ಇಷ್ಟೆಯೆ?' ಎಂಬ ಚಿಂತನೆ ಆಗಾಗ್ಗೆ ಬರುತ್ತಿತ್ತು. ಜೀವನದ ಅರ್ಥವೇನು? ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡುತ್ತಿತ್ತು. ತನ್ನ ಈ ಮನಸ್ಥಿತಿಯನ್ನು ಅವನು ಆಚಾರ್ಯರಿಗೆ ತೋಡಿಕೊಂಡನು.

''ದೇವದತ್ತ, ನಿನ್ನ ಮನಸ್ಸಿನ ಸ್ಥಿತಿ ನನಗೆ ಚೆನ್ನಾಗಿ ಅರ್ಥವಾಗುತ್ತದೆ. ಚಿಂತನೆ ಮಾಡಬೇಕಪ್ಪಾ, ಚಿಂತನೆ! ಬರಿಯ ಕರ್ಮಗಳನ್ನು ಮಾಡಿಕೊಂಡಿದ್ದರೆ ಏನು ತಾನೇ ಪ್ರಯೋಜನ? ಆತ್ಮಜ್ಞಾನವೇ ನಿಜವಾದ ಜ್ಞಾನ. ಅದನ್ನು ಕಂಡುಕೊಳ್ಳದೆ ಇರುವವರು ನಿಜವಾಗಲೂ ತಮ್ಮನ್ನು ತಾವು ಕೊಂದುಕೊಂಡಂತೆಯೇ ಸರಿ. ಎಷ್ಟು ಅನರ್ಥಗಳಿಗೆ ಅವರು ಗುರಿಯಾಗುತ್ತಾರೆ, ಅಲ್ಲವೆ?! ಆತ್ಮಜ್ಞಾನದಿಂದಲೇ ಜೀವನದಲ್ಲಿ ನಿಜವಾದ ಸಾರ್ಥಕತೆ ಬರುತ್ತದೆ. ಆದರೆ ಎಲ್ಲೆಡೆ ನಾವು ನೋಡುತ್ತಿರುವುದು ಕರ್ಮಕ್ಕೇ ಪ್ರಾಧಾನ್ಯವಿರುವುವನ್ನು'' ಎಂದು ಬೇಸರಗೊಂಡು ಆಚಾರ್ಯ ಭಾರ್ಗವರು ನುಡಿದರು.

ದೇವದತ್ತನು ಆಚಾರ್ಯ ಭಾರ್ಗವರಲ್ಲಿ ಶರಣುಹೋದನು. ಆತ್ಮತತ್ತ್ವವನ್ನು ಉಪದೇಶಿಸಬೇಕೆಂದು ದೀನಭಾವದಿಂದ ಕೇಳಿಕೊಂಡನು. ಇದಕ್ಕೆ ಒಪ್ಪಿದ ಆಚಾರ್ಯರು ಅವನಿಗೆ ಈ ಉಪದೇಶವನ್ನು ಮಾಡಿದರು:

''ಮಗು, ದೇವದತ್ತ. ನಿಲ್ಲುವುದು, ಚಲಿಸುವುದು – ಇವೆಲ್ಲ ಸಾಪೇಕ್ಷ ಕ್ರಿಯೆಗಳು. ಆತ್ಮತತ್ತ್ವವು ನಿರಪೇಕ್ಷ. ಅದಕ್ಕಿಂತ ಮೀರಿ

ದುದು. ಇದಲ್ಲದೆ ಅದು ಎಲ್ಲೆಡೆಯೂ ಇರುವಂಥ ತತ್ತ್ವ. ನಿಶ್ಚಲ ವಾಗಿದ್ದರೂ, ಎಲ್ಲ ಕಡೆ ಅದು ದೊರಕುತ್ತದೆ. ಮಲಗಿದ್ದರೂ ಎಲ್ಲ ಕಡೆ ಹೋಗಿಬರುತ್ತದೆ. ಅಂದರೆ ಅದಿಲ್ಲದ ಕಡೆಯೇ ಇಲ್ಲ ಎಂದರ್ಥ. ಎಲ್ಲ ಕಡೆ ಇದೆ ಎಂದರೆ ಏನು ? ಅದನ್ನು ಬಿಟ್ಟು ಯಾವುದೂ ಇಲ್ಲ ಎಂದೇ ಅರ್ಥ. ಆ ತತ್ತ್ವವೇ ನಾವಾಗಿದ್ದೇವೆ ಎಂದು ತಿಳಿದುಕೊಳ್ಳುವುದೇ ಆತ್ಮಜ್ಞಾನ ಎನಿಸಿಕೊಳ್ಳುತ್ತದೆ.''

ಈ ಸಂದರ್ಭದಲ್ಲಿ ದೇವದತ್ತನು ಆಚಾರ್ಯರಿಗೆ ಪ್ರಶ್ನಿಸು ತ್ತಾನೆ: ''ಆಚಾರ್ಯರೇ, ಆತ್ಮಜ್ಞಾನವನ್ನು ಪಡೆದ ಮಹಾಪುರು ಷನ ಲಕ್ಷಣಗಳೇನು?'' ಆಚಾರ್ಯರು ಕಣ್ಣುಮುಚ್ಚಿಕೊಂಡು, ಭಾವಪೂರ್ಣವಾಗಿ ಹೇಳುತ್ತಾರೆ, ''ಆತ್ಮಜ್ಞಾನವೆಂದರೆ ಆತ್ಮಾನು ಭೂತಿ. ಅದನ್ನು ಪಡೆದುಕೊಂಡ ಆತ್ಮಜ್ಞಾನಿಯು ಎಲ್ಲ ಜೀವಿಗಳೂ ತನ್ನ ಆತ್ಮವೆಂದೇ ಸಾಕ್ಷಾತ್ಕರಿಸಿಕೊಳ್ಳುತ್ತಾನೆ; ಎಲ್ಲ ಜೀವಿಗಳಲ್ಲಿಯೂ ತನ್ನ ಆತ್ಮವನ್ನೇ ಕಂಡುಕೊಳ್ಳುತ್ತಾನೆ. ಇದರ ಅರ್ಥ, ಎಲ್ಲೆಡೆ ಅವ ನಿಗೆ ಕೇವಲ ಆತ್ಮದರ್ಶನ ಮಾತ್ರವೇ ಆಗುತ್ತಿದೆ. ಈ ಐಹಿಕ ಜಗತ್ತು ಅವನ ಪಾಲಿಗೆ ಕಣ್ಮರೆಯಾಗುತ್ತದೆ.''

ಆಚಾರ್ಯರು ಮತ್ತೆ ಆತ್ಮಸ್ವರೂಪದ ಸಂಕ್ಷಿಪ್ತ ವಿವರಣೆ ಯನ್ನು ನೀಡುತ್ತಾರೆ: ''ಆತ್ಮವು ಹುಟ್ಟಿರುವುದಲ್ಲ. ಯಾವಾಗಲೂ ಇರುವಂಥದ್ದು. ಅದಕ್ಕೆ ಶರೀರವಿಲ್ಲ, ಮನಸ್ಸೂ ಇಲ್ಲ. ಎಲ್ಲ ಕಡೆ ಹಬ್ಬಿಕೊಂಡಿದೆ. ಈ ಜಗತ್ತು ಯಾವುದರ ಆಧಾರದ ಮೇಲೆ ನಡೆಯುವುದೋ ಆ ಸೂತ್ರವೇ ಆತ್ಮ.''

ದೇವದತ್ತನ ಮನಸ್ಸಿನಲ್ಲಿ ಇನ್ನೊಂದು ಸಂದೇಹ ಕಾಡಿತು : ''ಈ ಆತ್ಮಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಅರ್ಹತೆ ಏನು? ಇದನ್ನು ಪಡೆಯಲು ಏನು ಮಾಡಬೇಕು?'' ಇದನ್ನು ಅವನು ಆಚಾರ್ಯರಲ್ಲಿ ತೋಡಿಕೊಂಡನು. ಇದಕ್ಕೆ ಉತ್ತರವಾಗಿ ಆಚಾ ರ್ಯರು ಆತ್ಮಜ್ಞಾನಕ್ಕೆ ಬೇಕಾದ ಅರ್ಹತೆಯನ್ನು ಪಡೆಯಲು ಮಾಡಬೇಕಾದ ಸಾಧನಾವಿಧಾನವನ್ನು ಹೇಳಿಕೊಟ್ಟರು:

''ಮಗು, ಬರಿಯ ಕರ್ಮವನ್ನೇ ಮಾಡುತ್ತಿದ್ದರೆ ಆತ್ಮಜ್ಞಾನಕ್ಕೆ ಅರ್ಹತೆ ಲಭಿಸದು. ಹಾಗೆಯೇ ಕರ್ಮವನ್ನು ಬಿಟ್ಟು ದೇವತಾದಿ ಗಳ ಪೂಜೆ, ಉಪಾಸನೆ, ಧ್ಯಾನಗಳನ್ನು ಮಾಡುತ್ತ ಕುಳಿತರೆ ಇದ ಕ್ಕಿಂತ ಕೆಡುಕಾಗುತ್ತದೆ. ಉತ್ತಮವಾದ ಮಾರ್ಗವೇನು, ಗೊತ್ತೆ? ಕರ್ಮ ಮತ್ತು ಉಪಾಸನೆಗಳನ್ನು ಜೊತೆಜೊತೆಯಾಗಿ ಮಾಡುತ್ತ ಹೋಗುವುದು. ಮನಸ್ಸಿನಲ್ಲಿ ಭಗವಂತನ ಚಿಂತನೆ, ಸ್ಮರಣೆ, ಭಜನೆ ಸಂತತವೂ ನಡೆಯುತ್ತಿರಲಿ. ಬಾಹ್ಯದಲ್ಲಿ ನಿಷ್ಕಾಮಕರ್ಮ ವನ್ನು ಮಾಡುತ್ತ ಹೋಗುತ್ತಿರು. ಕ್ರಮೇಣ ನಿನ್ನ ಮನಸ್ಸು ಪವಿತ್ರ ವಾಗುತ್ತದೆ, ಏಕಾಗ್ರಗೊಳ್ಳುತ್ತದೆ; ಹೊರಜಗತ್ತಿನ ಮೇಲೆ ಜುಗುಪ್ಸೆ ಮೂಡುತ್ತದೆ. ಆಗ ಜ್ಞಾನದ ಅಂಕುರವಾಗುತ್ತದೆ. ಉಪಾಸನೆಯೇ ಬೇರೆ, ಕರ್ಮವೇ ಬೇರೆ ಎಂದು ನಮ್ಮ ಗುರುಗಳು ನಮಗೆ ಹೇಳಿ ಕೊಟ್ಟಿದ್ದಾರೆ. ಆದರೆ, ಅವೆರಡನ್ನೂ ನಮ್ಮ ಜೀವನದಲ್ಲಿ ಕೂಡಿಸಿ ಕೊಳ್ಳಬೇಕು ಎಂದು ಅವರೇ ಉಪದೇಶವನ್ನೂ ಮಾಡಿದ್ದಾರೆ. ಹೀಗೆ ಮಾಡಿದರೆ, ವೈದಿಕ ಕರ್ಮಗಳ ಮೂಲಕ ಸಾಧಾರಣ ಕರ್ಮಗಳನ್ನು ಮೀರಿಹೋಗಿ, ಉಪಾಸನೆಯ ಮೂಲಕ ನಾವು ಉಪಾಸನೆ ಮಾಡುವ ದೇವತೆಯಲ್ಲಿ ಆತ್ಮಭಾವವನ್ನು ಪಡೆದು ಕೊಳ್ಳಬಹುದು. ಈ ಸ್ಥಿತಿಯು ಖಂಡಿತ ಪ್ರಾಪಂಚಿಕ ಸ್ಥಿತಿಗಿಂತ ಮೀರಿದ್ದು. ಆದರೆ, ಇದರಲ್ಲೇ ನಾವು ನಿಂತುಬಿಡಬಾರದು. ಉಪಾಸನೆ ಮತ್ತು ನಿಷ್ಕಾಮಕರ್ಮಗಳ ಮೂಲಕ ಮಾನಸಿಕ ಏಕಾಗ್ರತೆಯನ್ನು ಮತ್ತು ಪರಿಶುದ್ಧತೆಯನ್ನು ಗಳಿಸಿಕೊಂಡು, ಆತ್ಮಜ್ಞಾನವನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು. ಆತ್ಮಜ್ಞಾನ ವನ್ನು ಹೊಂದುವುದೇ ಕರ್ಮಯೋಗ ಮತ್ತು ಧ್ಯಾನಯೋಗಗಳ ಉದ್ದೇಶ. ಯಾವುದೋ ಒಂದು ದೇವತಾ ಪದವಿಯನ್ನು ಪಡೆದು ಕೊಳ್ಳುವುದಲ್ಲ.''

ಇಷ್ಟು ಹೇಳಿ, ಆಚಾರ್ಯರು ದೇವದತ್ತನ ಮುಖವನ್ನು ನೋಡಿದರು. ಅವನಿಗೆ ಸ್ವಲ್ಪ ಸಮಾಧಾನವಾಗಿದ್ದುದು ಕಂಡು ಬಂತು. ಆದರೂ ಉಪಾಸನೆಯ ವಿಷಯದಲ್ಲಿ ಅವನಿಗೆ ಒಂದು ಸಂದೇಹವುಂಟಾಯಿತು. ಆಗಿನ ಕಾಲದಲ್ಲಿ ಎರಡು ರೀತಿಯ ಉಪಾಸನೆಗಳನ್ನು ಕೈಗೊಳ್ಳುತ್ತಿದ್ದರು. ಒಂದು ವ್ಯಾಕೃತ ಉಪಾಸನೆ, ಇನ್ನೊಂದು ಅವ್ಯಾಕೃತ ಉಪಾಸನೆ. ವ್ಯಾಕೃತ ಉಪಾಸನೆಯೆಂದರೆ, ಇಡೀ ಸೃಷ್ಟಿಯ ಸಮಷ್ಟಿರೂಪನಾದ ಹಿರಣ್ಯಗರ್ಭನ ಉಪಾಸನೆ. ಅವ್ಯಾಕೃತ ರೂಪವೆಂದರೆ, ಈ ಸೃಷ್ಟಿಗೆ ಕಾರಣವಾದ ಅವ್ಯಾಕೃತ ಅಥವಾ ಪ್ರಕೃತಿಯ ಉಪಾಸನೆ. ಇವೆರಡೂ ಬೇರೆ ಬೇರೆ ಉಪಾ ಸನಾ ವಿಧಾನಗಳು. ಇವುಗಳಲ್ಲಿ ಯಾವುದನ್ನು ಮಾಡಬೇಕು? ದೇವದತ್ತನ ಸಂದೇಹವನ್ನು ಪರಿಹರಿಸುತ್ತ, ಆಚಾರ್ಯರು ಅವನಿಗೆ ಹೇಳಿದರು: '' ಮಗು, ಈಗಾಗಲೇ ನಾನು ಉಪಾಸನೆ ಮತ್ತು ನಿಷ್ಕಾಮಕಾರ್ಮಗಳನ್ನು ಕೂಡಿಸಿಕೊಂಡೇ ಮಾಡ ಬೇಕೆಂದು ನಿನಗೆ ತಿಳಿಸಿಕೊಟ್ಟಿದ್ದೀನಷ್ಟೇ. ಇವೆರಡು ಉಪಾಸನಾ ವಿಧಾನಗಳ ವಿಷಯದಲ್ಲೂ ಇದೇ ಮಾರ್ಗವನ್ನು ಅನುಸರಿಸ ಬೇಕು. ಇವೆರಡೂ ಭಿನ್ನ ಮಾರ್ಗಗಳೆಂದು ನಮ್ಮ ಹಿರಿಯರಿಂದ ನಾವು ಕೇಳಿತಿಳಿದಿದ್ದೇವೆ. ಆದರೆ ಅವುಗಳನ್ನು ಪ್ರತ್ಯೇಕಿಸಿ, ಅನು ಷ್ಠಾನ ಮಾಡುವುದು ಸರಿಯಲ್ಲ. ಅವೆರಡನ್ನೂ ಸೇರಿಸಿಕೊಂಡು ಉಪಾಸನೆ ಮಾಡುವುದೇ ಒಳ್ಳೆಯದು. ವ್ಯಾಕೃತ ಉಪಾಸನೆ ಅಥವಾ ಹಿರಣ್ಯಗರ್ಭ ಉಪಾಸನೆಯಿಂದ ಹಲವಾರು ಸಿದ್ಧಿಗಳು ಪ್ರಾಪ್ತವಾಗುತ್ತವೆ. ಆ ಮೂಲಕ ನಮ್ಮ ದಾರಿದ್ರ್ಯ, ಬಡತನಗಳನ್ನು ನೀಗಿಸಿಕೊಂಡು, ಅವ್ಯಾಕೃತ ಉಪಾಸನೆ ಅಥವಾ ಪ್ರಕೃತಿ ಉಪಾ ಸನೆಯ ಮೂಲಕ ಪ್ರಕೃತಿಲಯವನ್ನು ಹೊಂದಬಹುದು.''

ಸ್ವಲ್ಪಹೊತ್ತು ಬಿಟ್ಟು, ಆಚಾರ್ಯರು ನಿಟ್ಟುಸಿರುಬಿಟ್ಟು ದೇವ ದತ್ತನಿಗೆ ಹೇಳಿದರು: ''ಮಗೂ, ಈ ಎಲ್ಲ ಸ್ಥಿತಿಗಳನ್ನು ವೇದವೇ ಉಪದೇಶಿಸುತ್ತದೆ ಎನ್ನುವುದೇನೋ ನಿಜ. ಆದರೆ ಅವು ಆತ್ಮ ಜ್ಞಾನಕ್ಕೆ ಹೋಲಿಸಿದಲ್ಲಿ ನಶ್ವರವಾದುವು. ಇದನ್ನೆಲ್ಲ ನಾನು ಏಕೆ ಉಪದೇಶಿಸಿದೆ, ಗೊತ್ತೆ? ಅವುಗಳ ಕ್ಷಣಿಕತೆಯನ್ನು, ನಶ್ವರತೆ ಯನ್ನು ಚೆನ್ನಾಗಿ ತಿಳಿದುಕೊಂಡು, ವಿವೇಕಿಯಾದವನು ಆತ್ಮ

ಜ್ಞಾನಕ್ಕೆ ಮಾತ್ರ ಪ್ರಯತ್ನಮಾಡಬೇಕು. ನಮ್ಮ ಕರ್ಮ ಮತ್ತು ಉಪಾಸನೆಗಳ ಗುರಿ ಆತ್ಮಜ್ಞಾನಕ್ಕೆ ಬೇಕಾದ ಅರ್ಹತೆಯನ್ನು ಸಂಪಾದಿಸಿಕೊಳ್ಳುವುದಷ್ಟೇ ಆಗಿರಬೇಕು. ತಿಳಿಯಿತೆ?''

ದೇವದತ್ತನು ತನ್ನ ಮನೆಗೆ ಹಿಂತಿರುಗಿದನು. ಆದರೆ ಕೆಲವೇ ದಿನಗಳಲ್ಲಿ ಮತ್ತೊಂದು ಸಂಶಯ ಅವನನ್ನು ಕಾಡಲು ಆರಂಭಿಸಿತು. ''ಆತ್ಮಜ್ಞಾನವೇ ಮುಖ್ಯವಾದರೆ, ವೇದಗಳು ಕರ್ಮವನ್ನು ಮತ್ತು ಉಪಾಸನೆಯನ್ನು ಉಪದೇಶಿಸಿರುವುದಾದರೂ ಏಕೆ? ಆಚಾರ್ಯರೇನೋ, ಅವು ಮನಸ್ಸಿನ ಏಕಾಗ್ರತೆಗೆ ಮತ್ತು ಮನಶ್ಶುದ್ಧಿಗೆ ಎಂದು ಸಮಾಧಾನ ಹೇಳಿದರು. ಹಾಗಾದರೆ, ಆತ್ಮಜ್ಞಾನವನ್ನು ಗಳಿಸದೆ, ಕೇವಲ ಕರ್ಮ-ಉಪಾಸನೆಗಳನ್ನೇ ಶ್ರದ್ಧೆಯಿಂದ ಅನುಷ್ಠಾನ ಮಾಡುವ ವ್ಯಕ್ತಿಯ ಪ್ರಯತ್ನವೆಲ್ಲವೂ ವ್ಯರ್ಥವೆ? ಆಚಾರ್ಯರು ಅವುಗಳಿಂದ, ನಾವು ಉಪಾಸನೆ ಮಾಡುವ ದೇವತೆಯಲ್ಲಿ ಏಕಾತ್ಮಭಾವವನ್ನು ಪಡೆದು, ಉತ್ತಮ ಲೋಕವನ್ನು ಗಳಿಸಬಹುದು ಎಂದೇನೋ ಹೇಳಿದರು. ಅದನ್ನು ಗಳಿಸುವುದೂ ಒಂದು ದೊಡ್ಡ ಸಾಧನೆಯೇ ಅಲ್ಲವೆ?'' ಎಂದು ಅವನು ಚಿಂತಿಸುತ್ತಿದ್ದನು. ಒಂದು ವಾರದ ನಂತರ ಪುರುಸೊತ್ತು ಮಾಡಿಕೊಂಡು, ಆಚಾರ್ಯ ಭಾರ್ಗವರ ಹತ್ತಿರ ಮತ್ತೆ ಹೋದನು.

ದೇವದತ್ತನನ್ನು ನೋಡಿದೊಡನೆಯೇ ಆಚಾರ್ಯ ಭಾರ್ಗವರು ಅವನನ್ನು ಸ್ವಾಗತಿಸಿ ಹೇಳಿದರು. ''ಬಾಪ್ಪ , ದೇವದತ್ತ, ನನಗೆ ಗೊತ್ತಿತ್ತು. ನೀನು ಮತ್ತೆ ಖಂಡಿತ ಬರುವೆಯೆಂದು. ನಾನು ಹೇಳಿದ ವಿಷಯಗಳು ಬರೀ ಕರ್ಮಗಳಲ್ಲೇ ಮುಳುಗಿರುವ ಜನರ ಮನಸ್ಸನ್ನು ಪ್ರಕ್ಷುಬ್ಧಗೊಳಿಸುವುದೇನೋ ನಿಜವೇ. ಆದರೆ ನಮ್ಮ ವೈದಿಕ ಚಿಂತನೆಗಳು ನಿಧಾನವಾಗಿ ವಿಕಸನಗೊಳ್ಳುತ್ತಿವೆ. ಅನೇಕ ಋಷಿಗಳು ಕರ್ಮದಿಂದ ಧ್ಯಾನ, ಧ್ಯಾನದಿಂದ ತತ್ತ್ವಚಿಂತನೆಯ ಘಟ್ಟಗಳಿಗೆ ತಮ್ಮ ನಿಲುವನ್ನು ಉನ್ನತಗೊಳಿಸುತ್ತ ಇದ್ದಾರೆ. ಇಂಥ ಉನ್ನತ ತತ್ತ್ವಚಿಂತನೆಗಳನ್ನು ಉಪನಿಷತ್ತುಗಳು ಎಂದು ಕರೆಯುತ್ತಾರೆ.'' ತದನಂತರ, ದೇವದತ್ತನ ಮನಸ್ಸಿನಲ್ಲಿ ಉದ್ಭವಿಸಿದ ಸಂದೇಹಗಳನ್ನು ಕೇಳಿ ತಿಳಿದು, ಸ್ವಲ್ಪ ಹೊತ್ತು ಮೌನವಾಗಿ ಕುಳಿತು ವಿಚಾರ ಮಾಡಿದರು.

'' ಮಗು, ದೇವದತ್ತ, ನಿನ್ನ ಸಂದೇಹಗಳು ಸರಿಯಾದವುಗಳೇ ಆಗಿವೆ. ಅವುಗಳನ್ನು ಪರಿಹರಿಸಲು ವೇದಗಳು ಬೋಧಿಸುವ ರೀತಿಯನ್ನು ನಾವು ತಿಳಿದುಕೊಳ್ಳಬೇಕು. ಲೌಕಿಕ ಕಾರ್ಯಗಳಲ್ಲಿ ಮನುಷ್ಯನಿಗೆ ಸಹಜ ಆಸಕ್ತಿ, ಅಲ್ಲವೆ? ಇದರಿಂದ ಅವನು ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗೆಂದೇ, ಅಂಥ ವ್ಯಕ್ತಿಗೆ ವೇದಗಳು ಧರ್ಮ ಅಂದರೆ, ಉನ್ನತ ಮಟ್ಟದ ಕರ್ತವ್ಯಗಳನ್ನು ಉಪದೇಶಿಸುತ್ತವೆ. ಇದರಿಂದ ಅವನು ತನ್ನ ಪ್ರಾಣಿಸಹಜವಾದ ಜೀವನವನ್ನು ತ್ಯಜಿಸಿ, ಹೆಚ್ಚು ಅರ್ಥವತ್ತಾದ ಜೀವನವನ್ನು ನಡೆಸಬಹುದು. ಇದೇ ವೈದಿಕ ಕರ್ಮಗಳ ಹಿಂದಿರುವ ಉದ್ದೇಶ. ಇಂಥ ಕರ್ಮಗಳಲ್ಲಿಯೂ ಯಾರಿಗೆ ಜುಗುಪ್ಸೆ ಬರುತ್ತದೆಯೋ, ಅವುಗಳಲ್ಲಿ ಅರ್ಥವಿಲ್ಲ ಎನ್ನಿಸುತ್ತದೆಯೋ, ಅಂಥವರು ಮಾತ್ರ ಆತ್ಮಜ್ಞಾನಕ್ಕೆ ಅರ್ಹರಾಗುತ್ತಾರೆ. ಹಾಗೆಂದು, ಕರ್ಮಗಳು ಮತ್ತು ಉಪಾಸನೆಗಳನ್ನು ಖಂಡಿತ ಕೀಳಾಗಿ ನೋಡಬಾರದು. ಅವು ಮನುಷ್ಯನ ಜೀವನವನ್ನು ಅದೆಷ್ಟೋ ಉನ್ನತ ಮಟ್ಟಕ್ಕೆ ಖಂಡಿತ ಒಯ್ಯುತ್ತವೆ. ಉನ್ನತ ಆಧ್ಯಾತ್ಮಿಕ ಅನುಭವಗಳನ್ನು ತಂದುಕೊಡುತ್ತವೆ. ಮನುಷ್ಯನ ಜೀವನವನ್ನು ಅರ್ಥವತ್ತಾಗಿ ಮಾಡುತ್ತವೆ. ಇಂಥ ನೆಲೆ ಖಂಡಿತ ಬಹಳ ದೊಡ್ಡ ಹಂತ. ಈ ಹಂತಕ್ಕೆ ಏರಿದವನಿಗೆ ಮುಂದಿನ ನೆಲೆಯಾದ ಆತ್ಮಜ್ಞಾನ ಅಷ್ಟೇನೋ ಕಷ್ಟವಲ್ಲ. ಆದರೆ ಅವನು ಅದಕ್ಕಾಗಿ ಇಚ್ಛಿಸಬೇಕು, ಅಷ್ಟೇ. ಈ ನೆಲೆಯಲ್ಲಿಯೇ ತೃಪ್ತಿಪಟ್ಟುಕೊಂಡು ಇರಬಾರದು.''

ಇಷ್ಟು ಹೇಳಿದ ಆಚಾರ್ಯ ಭಾರ್ಗವರು ಹಠಾತ್ತನೆ ಉದ್ವೇಗಭರಿತರಾದರು. ಕಣ್ಣುಗಳಲ್ಲಿ ನೀರು ಹರಿಯಲಾರಂಭಿಸಿತು. ಗದ್ಗದ ಕಂಠದಿಂದ ಅವರು ದೇವದತ್ತನಿಗೆ ಹೇಳಿದರು: ''ಮಗೂ, ವೇದಮಾತೆಯು ಅದೆಷ್ಟು ಕರುಣಾಶಾಲಿಯಾದವಳು! ಊಹಿಸುವುದಕ್ಕೂ ಸಾಧ್ಯವಿಲ್ಲ. ಎಂಥ ಉದಾತ್ತ ಮಹಾವ್ಯಕ್ತಿಗಳನ್ನು ಅವಳು ಸೃಷ್ಟಿಸಿದ್ದಾಳೆ, ಗೊತ್ತೇನು? ನನಗಿಂತ ಹಿರಿಯರೂ ಪೂಜ್ಯರೂ ಆದ ಉಗ್ರಶ್ರವಸರು ಪ್ರಕಾಂಡ ಕರ್ಮಠರು. ವೈದಿಕ ಕರ್ಮಗಳಲ್ಲಿ ಅವರದು ಸಿದ್ಧಹಸ್ತ. ಚಾಚೂತಪ್ಪದೆ ಅವರು ತಮ್ಮ ಮನೆಯ ಅಗ್ನಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಇದರ ಜೊತೆಗೆ ದಿನವೂ ಗಂಟೆಗಟ್ಟಲೆ ಉಪಾಸನೆ, ಧ್ಯಾನಗಳಲ್ಲಿ ಅವರು ತೊಡಗುತ್ತಿದ್ದರು. ಸೂರ್ಯೋಪಾಸನೆಯನ್ನು ಪ್ರತಿದಿನ ಮಾಡುತ್ತಿದ್ದರು. ತಮ್ಮ ನೆರೆಹೊರೆಯವರಿಂದ ಬಹಳ ಗೌರವವನ್ನು ಸಂಪಾದಿಸಿದ್ದರು. ಈಗ ಕಾಯಿಲೆ ಹಿಡಿದು ಮಲಗಿದ್ದಾರೆ. ಇಂದೋ ನಾಳೆಯೋ ಎಂಬಂತೆ ಇದೆ ಅವರ ಸ್ಥಿತಿ. ಕರ್ಮ-ಉಪಾಸನೆಗಳ ಮೂಲಕ ಅದೆಷ್ಟು ಮನಃಪಕ್ವತೆಯನ್ನು ಪಡೆಯಬಹುದು ಎನ್ನುವುದನ್ನು ಅವರನ್ನು ನೋಡಿದರೆ ತಿಳಿಯುತ್ತದೆ. ನಾನು ಅವರನ್ನು ನೋಡಲು ನಾಳೆ ಅವರ ಗ್ರಾಮಕ್ಕೆ ಹೊರಟಿದ್ದೇನೆ. ನೀನೂ ಬಂದರೆ ಕರೆದುಕೊಂಡು ಹೋಗುತ್ತೇನೆ. ಆಗ ನಾನು ಹೇಳಿದ ಮಾತಿನ ಅರ್ಥ ನಿನಗೆ ಆಗುತ್ತದೆ.''

ಮರುದಿನ ಬೆಳಗ್ಗೆಯೆ ದೇವದತ್ತನು ಭಾರ್ಗವರ ಮನೆಗೆ ಬಂದುಬಿಟ್ಟನು. ಒಂದು ಎತ್ತಿನ ಗಾಡಿಯಲ್ಲಿ ಕುಳಿತು ಇಬ್ಬರೂ ಹೊರಟರು. ಸರಸ್ವತೀ ನದಿಯ ತಟದಲ್ಲಿಯೇ ರಸ್ತೆ ಸಾಗುತ್ತಿತ್ತು. ಒಂದು ಕಡೆ ನಯನಮನೋಹರವಾದ ನದಿ ಹರಿಯುತ್ತಿದ್ದರೆ, ಇನ್ನೊಂದು ಕಡೆ ದಟ್ಟ ಅರಣ್ಯ ಬೆಟ್ಟಗಳ ಸಾಲು. ಇವುಗಳ ನಡುವಿನ ಕಿರಿದಾದ ಕಣಿವೆಯಲ್ಲಿ ರಸ್ತೆ ಸಾಗುತ್ತಿತ್ತು. ಈ ಮೋಹಕ ಪ್ರಕೃತಿ ಸೌಂದರ್ಯವನ್ನು ಸವಿಯುತ್ತ ಇಬ್ಬರೂ ಸಾಗಿದರು. ಆದರೆ ಇಬ್ಬರ ಹೃದಯವೂ ಭಾರವಾಗಿತ್ತು. ಆಚಾರ್ಯ ಭಾರ್ಗವರಂತೂ ದುಃಖದಿಂದ ನಿಟ್ಟುಸಿರು ಬಿಡುತ್ತಿದ್ದರು. ಮೂರು ಗಂಟೆಗಳ ಪ್ರಯಾಣದ ನಂತರ, ನದಿಯ ಪಕ್ಕದ ಗ್ರಾಮವೊಂದರ ವಿಶಾಲವಾದ ಮನೆಯ ಮುಂದೆ ಗಾಡಿ ನಿಂತಿತು. ಮನೆಯೊಳಗೆ ಹೋದರೆ, ಹತ್ತಾರು ಬಂಧುಬಾಂಧವರು

ಈಗಾಗಲೇ ನೆರೆದಿದ್ದರು. ದೊಡ್ಡ ಕೊಠಡಿಯ ಮಧ್ಯೆ ಹಾಕಿದ್ದ ಹಾಸಿಗೆಯ ಮೇಲೆ ವೃದ್ಧರೊಬ್ಬರು ಮಲಗಿದ್ದರು. ಉಸಿರು ಬಿಡಲು ಕಷ್ಟವಾಗುತ್ತಿದ್ದರೂ, ಹಸನ್ಮುಖಿಗಳಾಗಿದ್ದರು. ತೇಜಸ್ಸಿನಿಂದ ಅವರ ಮುಖ ಬೆಳಗುತ್ತಿತ್ತು. ಆಚಾರ್ಯ ಭಾರ್ಗವರು ಮತ್ತು ದೇವದತ್ತರಿಬ್ಬರೂ ಅವರ ಹಾಸಿಗೆಯ ಹತ್ತಿರ ಹೋಗಿ ನಿಂತರು. ಭಾರ್ಗವರನ್ನು ಗುರುತಿಸಿದ ವೃದ್ಧ ಉಗ್ರಶ್ರವಸರು ತಲೆ ಅಲ್ಲಾಡಿಸಿದರು. ಮೇಲುಗಡೆ ಕೈತೋರಿಸಿ, ''ಹೊರಟಿದ್ದೇನೆ ಎನ್ನುವಂತೆ ಸನ್ನೆ ಮಾಡಿದರು.

ಐದು-ಹತ್ತು ನಿಮಿಷಗಳ ಕಾಲ ಇಡೀ ವಾತಾವರಣ ನೀರವವಾಗಿತ್ತು. ಸನಿಹದಲ್ಲಿಯೇ ಉರಿಯುತ್ತಿದ್ದ ಹೋಮಾಗ್ನಿಯ ಚಟಚಟ ಶಬ್ದದ ಹೊರತು, ಬೇರೆ ಯಾವ ಶಬ್ದವೂ ಕೇಳಿಸುತ್ತಿರಲಿಲ್ಲ. ಹಾಸಿಗೆಯ ಪಕ್ಕದಲ್ಲಿದ್ದ ಕಿಟಕಿಯಿಂದ ಸೂರ್ಯನ ಕಿರಣಗಳು ತೂರಿಬರುತ್ತಿದ್ದವು. ಹಠಾತ್ತನೆ, ಮಲಗಿದ್ದ ವೃದ್ಧರು ಕುಳಿತುಕೊಳ್ಳಲು ಪ್ರಯತ್ನಿಸಿದರು. ಅವರ ಮಕ್ಕಳು ದಿಂಬುಗಳ ಆಸರೆ ಕೊಟ್ಟು ಕುಳ್ಳಿರಿಸಿದರು. ತಮ್ಮ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ, ನಮಸ್ಕಾರ ಮಾಡುತ್ತ, ಕಣ್ಣುಗಳನ್ನು ಮೇಲೆ ಮಾಡಿ ವೃದ್ಧರು ಸಣ್ಣದನಿಯಿಂದ, ಆದರೆ ಅತ್ಯಂತ ಸ್ಪಷ್ಟವಾಗಿ, ಈ ಪ್ರಾರ್ಥನೆಯನ್ನು ಮಾಡಿದರು:

'' ಓ ಸೂರ್ಯದೇವ, ನಿನ್ನ ಮಂಡಲವು ಬಂಗಾರದ ಪಾತ್ರೆಯಂತೆ ಇದೆ. ನಿನ್ನಲ್ಲಿ ಅಂತರ್ಗತವಾದ ಪರಮಾತ್ಮನನ್ನು ಅದು ಮುಚ್ಚಿದೆ. ನಿನ್ನ ಪ್ರಕಾಶಮಯವಾದ ರಶ್ಮಿಗಳು ಅವನನ್ನು ನಾನು ಕಾಣಲು ಬಿಡುತ್ತಿಲ್ಲ. ದಯವಿಟ್ಟು ಅವುಗಳನ್ನು ನಿವಾರಿಸಿ, ನಿನ್ನ ಸತ್ಯರೂಪವನ್ನು ನೋಡಲು ನನಗೆ ಅನುವು ಮಾಡಿಕೊಡು. ಏಕೆಂದರೆ, ನನ್ನ ಜೀವನದ ಉದ್ದಕ್ಕೂ ಸತ್ಯರೂಪಿಯಾದ ಪರಮಾತ್ಮನ ಉಪಾಸನೆಯನ್ನು ನಾನು ಮಾಡಿದ್ದೇನೆ. ನಾನು ಮಾಡಬೇಕಾದ ಆಚರಣೆಗಳನ್ನು ಮತ್ತು ಉಪಾಸನೆಗಳನ್ನು ಯಥಾವತ್ತಾಗಿ ನಡೆಸಿಕೊಂಡು ಬಂದಿದ್ದೇನೆ. ಸೂರ್ಯಮಂಡಲ ಮಧ್ಯವರ್ತಿಯಾದ ಹೇ ಪರಮಾತ್ಮ, ನನ್ನ ಇಡೀ ಜೀವನದುದ್ದಕ್ಕೂ ನೀನೇ ಪೋಷಕನಾಗಿದ್ದೀಯೆ, ಪಾಲಕನೂ ಆಗಿದ್ದೀಯೆ. ನಿನ್ನನ್ನು ನಾನು ಕಾಣುವಂತೆ ಮಾಡಲು ನಿನ್ನ ಪ್ರಖರವಾದ ಕಿರಣಗಳನ್ನು ದೂರಸರಿಸು. ನಾನು ನಿನ್ನಲ್ಲಿ ಐಕ್ಯಭಾವವನ್ನು ಹೊಂದುವಂತಾಗಲಿ. ಇಡೀ ಜೀವನದುದ್ದಕ್ಕೂ ನಿನ್ನ ಉಪಾಸನೆಯನ್ನು ಮಾಡಿರುವ ನನ್ನನ್ನು ನಿನ್ನಲ್ಲಿ ತಾದಾತ್ಮ್ಯಗೊಳಿಸು.''

ತದನಂತರ, ತಮ್ಮ ತಲೆಯನ್ನು ಕೆಳಕ್ಕೆ ಇಳಿಸಿದ ವೃದ್ಧರು, ಮುಗಿದ ಕೈಗಳನ್ನೂ ಕೆಳಕ್ಕೆ ಇಳಿಸಿದರು. ಪ್ರಾರ್ಥನೆಯನ್ನು ಮುಂದುವರೆಸಿದರು: ''ನನ್ನ ಪ್ರಾಣವು ಎಲ್ಲ ಕಡೆ ಬೀಸುತ್ತಿರುವ ಮುಖ್ಯಪ್ರಾಣನಾದ ಹಿರಣ್ಯಗರ್ಭನಲ್ಲಿ ಸೇರಿಹೋಗಲಿ. ಯಾವ ಅಗ್ನಿಯನ್ನು ನಾನು ನನ್ನ ಜೀವನದಲ್ಲಿ ಹಗಲಿರುಳೂ ಉಪಾಸನೆ ಮಾಡಿದ್ದೆನೋ, ಅದರಲ್ಲಿಯೇ ನನ್ನ ಶರೀರವು ಭಸ್ಮವಾಗಿ



ಹೋಗಲಿ. ಸತ್ಯರೂಪನೂ, ಓಂಕಾರರೂಪನೂ ಅಗ್ನಿರೂಪನೂ ಆದ ಹೇ ಪರಮಾತ್ಮ, ನಾನು ಈ ಅಂತ್ಯಕಾಲದಲ್ಲಿ ಯಾವ ನಿನ್ನ ಅಮೃತರೂಪವನ್ನು ಸ್ಮರಣೆ ಮಾಡಬೇಕೋ, ಅದನ್ನು ಚಾಚೂ ತಪ್ಪದೆ ನನ್ನ ನೆನಪಿಗೆ ತಂದುಕೊಡು. ನಾನು ನನ್ನ ಜೀವನದುದ್ದಕ್ಕೂ ಪ್ರತಿನಿತ್ಯವೂ ಎಡೆಬಿಡದೆ ಮಾಡಿದ ಕರ್ಮ, ಉಪಾಸನೆಗಳನ್ನು ನೀನು ಪರಿಗಣಿಸಿ, ನನಗೆ ಸದ್ಗತಿಯನ್ನು ಕೊಡು.''

ಇನ್ನು ತಮ್ಮ ಮುಂದೆ ಉರಿಯುತ್ತಿದ್ದ ವೈದಿಕಾಗ್ನಿಯನ್ನೇ ದಿಟ್ಟಿಸುತ್ತ ವೃದ್ಧರು ಪ್ರಾರ್ಥನೆ ಮಾಡಿದರು: '' ಓ ಅಗ್ನಿರೂಪನಾದ ಪರಮಾತ್ಮ, ನನ್ನನ್ನು ಒಳ್ಳೆಯ ದಾರಿಯಲ್ಲಿ , ಉತ್ತಮ ಲೋಕಗಳಿಗೆ ಕರೆದುಕೊಂಡು ಹೋಗು. ನೀನು ಎಲ್ಲ ಕರ್ಮಗಳ ಬಗ್ಗೆ ಮತ್ತು ಅವುಗಳ ಫಲಗಳ ಬಗ್ಗೆ ತಿಳಿದಿರುವ ಸರ್ವಜ್ಞನಾಗಿದ್ದೀಯೆ. ನನ್ನಿಂದ ಏನಾದರೂ ತಪ್ಪಾಗಿದ್ದರೆ, ಅಪಚಾರವಾಗಿದ್ದರೆ, ಅವುಗಳನ್ನು ಹೋಗಲಾಡಿಸು. ಅಗ್ನಿದೇವ. ಇಷ್ಟು ವರ್ಷಗಳ ಕಾಲ ನಿನ್ನ ಸೇವೆ, ಆರಾಧನೆಗಳನ್ನು ನಾನು ಮಾಡುತ್ತ ಬಂದಿದ್ದೇನೆ. ನನ್ನ ಶರೀರ ಬಹಳ ಕೃಶವಾಗಿ ಹೋಗಿದೆ. ನಾನು ಬಹಳ ದುರ್ಬಲನಾಗಿದ್ದೇನೆ. ಈ ಶರೀರವನ್ನು ಬಿಟ್ಟುಹೋಗಲು ಕಾತುರನಾಗಿದ್ದೇನೆ. ಹೀಗಾಗಿ ಹಿಂದಿನಂತೆ ನನಗೆ ನಿನ್ನ ಸೇವೆಯನ್ನು ಮಾಡಲು ಆಗುವುದಿಲ್ಲ. ಆದಕಾರಣ, ಕೇವಲ ನಮಸ್ಕಾರವನ್ನು ಮಾತ್ರ ಮಾಡುತ್ತಿದ್ದೇನೆ. ಹೇ ದೇವದೇವ, ನಿನಗೆ ಮತ್ತೆ ಮತ್ತೆ ನಮಸ್ಕಾರಗಳು, ಮತ್ತೆ ಮತ್ತೆ ನಮನಗಳು''

ಇಷ್ಟು ನುಡಿಯುತ್ತಿದ್ದಂತೆಯೇ ವೃದ್ಧ ಉಗ್ರಶ್ರವಸರ ಉಸಿರು ನಿಂತಿತು. ಆದರೆ ಪ್ರಾರ್ಥನಾ ಭಾವದ ಅವರ ಕಣ್ಣುಗಳು ತೆರೆದೇ ಇದ್ದವು; ಕೈಗಳು ಮುಗಿದೇ ಇದ್ದವು. ಸುತ್ತಲೂ ನಿಂತಿದ್ದವರು ಈ ಮಹಾತ್ಮನಿಗೆ ಕೈಬಾಗಿ ನಮಿಸಿದರು. ಅವರೆಲ್ಲರ ಕಣ್ಣುಗಳ ಅಂಚುಗಳಲ್ಲಿ ಅಶ್ರು ಚಿಮ್ಮಿತು. ಆದರೆ ಹೃದಯದಲ್ಲಿ ಹೇಳಲಾಗದ ಧನ್ಯತಾಭಾವ ಮೂಡಿತು. ಇಡೀ ವಾತಾವರಣ ಸ್ತಬ್ಧವಾಗಿತ್ತು; ಪವಿತ್ರತೆಯಿಂದ ತುಂಬಿಕೊಂಡಿತ್ತು. ಮನೆಯ ಹೊರಗಿದ್ದ ಸೂರ್ಯನು ಇನ್ನೂ ಪ್ರಖರವಾಗಿ ಬೆಳಗಲಾರಂಭಿಸಿದನು; ಮನೆಯ ಒಳಗಿದ್ದ ಅಗ್ನಿಯು ಇನ್ನೂ ಜೋರಾಗಿ ಉರಿಯಲಾರಂಭಿಸಿತು.